<u>**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**</u>

<u>**ಸಿ.ಸಿಃ 2003/2014**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಚಂದ್ರಶೇಖರ್** | ಪ್ರಾಸಾಃ 4 |
| ತಂದೆಯ/ಗಂಡನ ಹೆಸರು | | ರಾಮಲಿಂಗೇಗೌಡ | ಚಾಸಾಃ 9 |
| ವಯಸ್ಸು | | 39 ವರ್ಷ | |
| ಕೆಲಸ | | ಕೆ.ಎಸ್.ಆರ್.ಟಿ.ಸಿ ನಿರ್ವಾಹಕ, ಅರಸೀಕೆರೆ ಡಿಪೋ | ಸಾ ಪ್ರ ಬೋ |
| ವಾಸ | | ಬಾಣವಾರ | ದಿಃ 20/06/2023 |

<u>**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**</u>

ದಿನಾಂಕ 04.05.2012 ರಿಂದ 17.11.2017 ರವರೆಗೂ ನಾನು ನಂಜನಗೂಡಿನ ಡಿಪೋದಲ್ಲಿ ಕೆ.ಎಸ್.ಆರ್.ಟಿ.ಸಿ ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18.05.2014 ರಂದು ಕೆಎ-09-ಎಫ್-3350 ರ ಬಸ್ ಗೆ ಆರೋಪಿ ಚಾಲಕರಾಗಿ ಮತ್ತು ನಾನು ನಿರ್ವಾಹಕನಾಗಿ ನಂಜನಗೂಡು-ಹೆಮ್ಮರಗಾಲ ಮಾರ್ಗಕ್ಕೆ ಕರ್ತವ್ಯಕ್ಕೆ ನೇಮಕವಾಗಿದ್ದೆವು. ಆ ದಿನ ಸಂಜೆ 4.45 ಕ್ಕೆ ನಾವು ನಂಜನಗೂಡನ್ನು ಬಿಟ್ಟ ಹೆಮ್ಮರಗಾಲಕ್ಕೆ ಹೋಗುತ್ತಿದ್ದಾಗ ನಂಜನಗೂಡು-ಚಾಮರಾಜನಗರ ಮುಖ್ಯ ರಸ್ತೆಯ ಮಹದೇವನಗರದಲ್ಲಿ ಸುಮಾರು ಪ್ರಯಾಣಿಕರು ಇದ್ದು ಅವರನ್ನು ಮಹದೇವನಗರದಲ್ಲಿ ಇಳಿಸಿ ಬೇರೆ ಪ್ರಯಾಣಿಕರವನ್ನು ಹತ್ತಿಸಿಕೊಂಡು ಸುಮಾರು 20 ಮೀಟರ್ ಮುಂದಕ್ಕೆ ಹೋದಾಗ ನಮ್ಮ ಚಾಲಕರು ವಾಹನವನ್ನು ನಿಲ್ಲಿಸಿ ಅಪಘಾತವಾಗಿದೆ ಎಂದು ತಿಳಿಸಿದರು. ನಾನು ಆರೋಪಿ ಮತ್ತು ಇತರೆ ಪ್ರಯಾಣಿಕರು ಬಸ್ ನಿಂದ ಕೆಳಗೆ ಇಳಿದು ನೋಡಿದಾಗ ಒಂದು ಟಿ.ವಿ.ಎಸ್. ಎಕ್ಸ್‌ಎಲ್‌ಗೂ ನಮ್ಮ ಬಸ್ ಗೆ ಅಪಘಾತವಾಗಿತ್ತು. ಟಿ.ವಿ.ಎಸ್. ಎಕ್ಸ್‌ಎಲ್ ಸವಾರ ಕೆಳಗೆ ಬಿದ್ದಿದ್ದರು. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಪ್ರಕರಣದ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಮೃತ ರಾಜಣ್ಣ ರವರು ಹೇಗೆ ತೀರಿಹೋದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ಆ ದಿನ ಮಧ್ಯಾಹ್ನ 3.30 ಕ್ಕೆ ಆರೋಪಿಯು ಹೆಮ್ಮರಗಾಲಕ್ಕೆ ಹೋಗುವಾಗ ಬಸ್ಸನ್ನು ಅತಿವೇಗವಾಗಿ ಚಲಾಯಿಸಿ ಮಹದೇವನಗರದ ಬಳಿ ಒಂದು ಮೊಪೆಡ್ ಗೆ ಡಿಕ್ಕಿ ಮಾಡಿದ ಪರಿಣಾಮ ಆತ ಕೆಳಗೆ ಬಿದ್ದು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಬಸ್ ನ ಮಧ್ಯಭಾಗದಲ್ಲಿ ಟಿಕೆಟ್ ವಿತರಿಸುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಅಪಘಾತವು ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯ ಬಸ್ ಚಾಲನೆಯಿಂದಾಗಿ ಜರುಗಿರುತ್ತದೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ದಿನಾಂಕ 31.05.2014 ರಂದು ಈಗ ನನಗೆ ಓದಿ ಹೇಳಿದಂತೆ " ಸಂಜೆ ಸುಮಾರು 3.30 ಗಂಟೆಗೆ - - - - ಬೇರೆ ಏನು ಕಾರಣವಿರುವುದಿಲ್ಲ" ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು. ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿ ನನ್ನ ಸಹೋದ್ಯೋಗಿಯಾಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**